# 5. ಧ್ವನಿ ಪ್ರದೂಷಣೆ






ಅಂದು ಶಾಲೆಯಲ್ಲಿ ಎಲ್ಲ ಕಡೆಗೂ ಸಡಗರವೇ ಸಡಗರ. ಮಕ್ಕಳೆಲ್ಲ ಗಡಿಬಿಡಿಯಿಂದ ಆಚೆ–ಈಚೆ ಓಡಾಡುತ್ತಿದ್ದರು. ಮರುದಿನವೇ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನವಿತ್ತು. ಕಾರ್ಯಕ್ರಮಗಳ ಸಿದ್ಧತೆಗಳು ವೇಗದಿಂದ ಸಾಗಿದ್ದವು. ಐದನೆಯ ತರಗತಿಯ ಮಕ್ಕಳು 'ಆದಿವಾಸಿ ನೃತ್ಯ'ವನ್ನು ಮಾಡುತ್ತಿದ್ದರು. ವರ್ಗದ ಸಮೀಪ 'ಧ್ವನಿವರ್ಧಕ'ದ ಸ್ವರ ಕೇಳಿ ಬರುತ್ತಿತ್ತು.

ಅಷ್ಟರಲ್ಲಿ ಐದನೆಯ ತರಗತಿಯ ಗುರುಗಳು ಬಂದರು. ಮಕ್ಕಳೆಲ್ಲರೂ ಸುಪ್ರಭಾತ ಗುರುಗಳೇ, ಅಂದರು.

**ಗುರುಗಳು** : ಮಕ್ಕಳೇ ಧ್ವನಿ ಸುರುಳಿಯನ್ನು ಸ್ವಲ್ಪ ನಿಲ್ಲಿಸಿರಿ. ಇಡೀ ಶಾಲೆಗೆ ನಿಮ್ಮ ಗದ್ದಲ ಕೇಳುತ್ತಲಿದೆ. ಎಲ್ಲಿದ್ದಾನೆ ಸಮೀರ ?

**ಸಮೀರ** : ಕ್ಷಮಿಸಿರಿ ಗುರುಗಳೇ, ನೃತ್ಯಮಾಡುವ ಭರದಲ್ಲಿ ಧ್ವನಿ ಹೆಚ್ಚಾದುದು ನಮಗೆ ತಿಳಿಯಲೇ ಇಲ್ಲ.

**ಗುರುಗಳು** : ಇಷ್ಟು ಜೋರಿನಿಂದ ಧ್ವನಿ ಸುರುಳಿಯನ್ನು ಕೇಳಿದರೆ ಕಿವಿಗಳಿಗೆ ಅಪಾಯ ಉಂಟಾಗುತ್ತದೆ.

**ವೃಂದಾ** : ಅಂದರೆ, ಇದರಿಂದ ಕಿವಿಗಳಿಗೆ ಏನು ಆಗುತ್ತದೆ ಗುರುಗಳೇ ?

**ಗುರುಗಳು** : ಕಿವಿಗಳ ಒಳಗೆ ತೆಳುವಾದ ಧ್ವನಿ ಪಟಲ ಇರುತ್ತದೆ. ಆ ಪಟಲದ ಮೇಲೆ ಇಂತಹ ಧ್ವನಿಯ ತೆರೆಗಳು ಅಪ್ಪಳಿಸುತ್ತವೆ. ಇದರಿಂದ ಆ ಪಟಲಗಳ ಶಕ್ತಿ ಕಡಿಮೆಯಾಗುತ್ತದೆ. ಕಿವುಡುತನ ಬರುತ್ತದೆ.

**ಮಹಮ್ಮದ** : ಗುರುಗಳೆ, ರಸ್ತೆಯಲ್ಲಿ ಹೋಗುವ ವಾಹನಗಳು ಎಂತಹ ಭಯಂಕರ ಸದ್ದು ಮಾಡುತ್ತವಲ್ಲ!

**ಗುರುಗಳು** : ಮಹಮ್ಮದ, ನೀನು ಸರಿಯಾಗಿ ಹೇಳಿದೆ. ವಾಹನಗಳು ರಸ್ತೆಯ ಮೇಲೆ ಸತತವಾಗಿ ಕರ್ಕಶ ಧ್ವನಿ ಮಾಡುವುದರಿಂದಲೂ ನಮ್ಮ ಕಿವಿಗೆ ಅಪಾಯ ಉಂಟಾಗುತ್ತದೆ. ಇದಕ್ಕೆ ಧ್ವನಿ ಪ್ರದೂಷಣೆ ಎನ್ನುತ್ತಾರೆ.

**ವಸಂತ** : ಗುರುಗಳೆ, ಮನೆಯಲ್ಲಿ ರೇಡಿಯೋ, ದೂರದರ್ಶನಗಳನ್ನು ದೊಡ್ಡದಾಗಿ ಹಚ್ಚಬಾರದು ಅಲ್ಲವೆ ?

**ಗುರುಗಳು** : ವಸಂತ, ನಿನ್ನ ಮಾತು ತುಂಬ ಸರಿಯಾಗಿದೆ. ಮನೆಯಲ್ಲಷ್ಟೇ ಅಲ್ಲ, ಸಭೆ-ಸಮಾರಂಭಗಳಲ್ಲೂ ಹಬ್ಬ-ಹರಿದಿನಗಳಲ್ಲೂ ಧ್ವನಿವರ್ಧಕಗಳನ್ನು ಜೋರಾಗಿ ಹಚ್ಚಬಾರದು. ಇದರಿಂದ ನಮ್ಮ ಕಿವಿಯ ಧ್ವನಿ ಪಟಲದ ಮೇಲೆ ಪರಿಣಾಮವಾಗುತ್ತದೆ.

**ಮೀರಾ** : ಗುರುಗಳೆ, ಇಂದು ನೀವು ನಮ್ಮ ಕಣ್ಣು ತೆರೆಯಿಸಿದಿರಿ. ಧ್ವನಿ ಪ್ರದೂಷಣೆಯ ಕುರಿತು ನಾವೆಲ್ಲ ಇನ್ನು ಮುಂದೆ ತುಂಬ ಎಚ್ಚರಿಕೆಯಿಂದ ಇರುತ್ತೇವೆ.

**ಚಾರ್ಲಿ** : ಗುರುಗಳೆ, ನಮ್ಮ ನೃತ್ಯವನ್ನು ಮುಂದುವರಿಸಬಹುದೇ ?

**ಗುರುಗಳು** : ಸರಿ ಸರಿ, ಮುಂದುವರಿಸಿರಿ.

**ಶಬ್ದಗಳ ಅರ್ಥ :**

ಸಡಗರ - ಉತ್ಸಾಹ ; ಆದಿವಾಸಿ - ಬುಡಕಟ್ಟು ಜನಾಂಗ ; ಸ್ವರ - ಧ್ವನಿ ; ಸುಪ್ರಭಾತ - ಬೆಳಗಿನ ಹೊತ್ತು, ಮುಂಜಾವು

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರದೂಷಣೆ - ................ ; ಪಟಲ - ............ ; ಕಿವುಡ - ................ ; ಕರ್ಕಶ - ................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಶಾಲೆಯಲ್ಲಿ ಸಡಗರವು ಏಕೆ ತುಂಬಿಕೊಂಡಿತ್ತು ?

ಉತ್ತರ ..........................................................................

ಆ) ಐದನೆಯ ತರಗತಿಯ ಮಕ್ಕಳು ಯಾವ ನೃತ್ಯ ಮಾಡುತ್ತಿದ್ದರು ?

ಉತ್ತರ ..........................................................................

ಇ) ಧ್ವನಿ ಪ್ರದೂಷಣೆಯಿಂದ ಆಗುವ ತೊಂದರೆಗಳು ಯಾವವು ?

ಉತ್ತರ ..........................................................................

**ಪ್ರಶ್ನೆ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ) ..........................................................................

ಉತ್ತರ ..........................................................................

ಆ) ………………………………………………………………………

ಉತ್ತರ ………………………………………………………………………

**ಪ್ರಶ್ನೆ 3) ಕಂಸದಲ್ಲಿಯ ಯೋಗ್ಯ ಶಬ್ದವನ್ನು ಆಯ್ದು ಬಿಟ್ಟ ಸ್ಥಳ ತುಂಬಿರಿ.**

1) ಶಾಲೆಯಲ್ಲಿ ಎಲ್ಲ ಕಡೆಗೆ ಸಡಗರವೇ ಸಡಗರವಿತ್ತು. ಏಕೆಂದರೆ …………………

(ಶಿಕ್ಷಕರ ದಿನಾಚರಣೆ, ಮಕ್ಕಳ ಸ್ನೇಹ ಸಮ್ಮೇಲನ, ಮಕ್ಕಳ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ)

2) ನೃತ್ಯ ಮಾಡುವ ಭರದಲ್ಲಿ ಧ್ವನಿ ಹೆಚ್ಚಾದುದು ನಮಗೆ ತಿಳಿಯಲೇ ಇಲ್ಲ. ಈ ಮಾತು ಹೇಳಿದವರು ……………

(ಮಹಮ್ಮದ, ವೃಂದಾ, ಸಮೀರ, ಚಾರ್ಲಿ)

3) ಧ್ವನಿ ಸುರುಳಿ ಜೋರಾಗಿದ್ದರೆ ……………. ಗೆ ತೊಂದರೆ ಉಂಟಾಗುವದು.

(ಕಣ್ಣು, ಮೂಗು, ಕಿವಿ, ತ್ವಚೆ)

**ಪ್ರಶ್ನೆ 4) ''ಪ್ರ'' ದಿಂದ ಪ್ರಾರಂಭವಾಗುವ 5 ಶಬ್ದಗಳನ್ನು ರಚಿಸಿರಿ.**

**ಉದಾ :** ಪ್ರ = ಪ್ರಯತ್ನ

ಪ್ರ = ………………… ಪ್ರ = ………………… ಪ್ರ = …………………

ಪ್ರ = …………………

**ಪ್ರಶ್ನೆ 5) ಕೆಳಗೆ ಕೊಟ್ಟಿರುವ ಬೇರೆ ಬೇರೆ ರಾಜ್ಯಗಳ ನೃತ್ಯಗಳನ್ನು ಹೆಸರಿಸಿರಿ.**

| | | | |
|---|---|---|---|
| **ಉದಾ :** | ಮಹಾರಾಷ್ಟ್ರ | ________ | ಲಾವಣಿ |
| | ಕರ್ನಾಟಕ | ________ | |
| | ಆಂಧ್ರಪ್ರದೇಶ | ________ | |
| | ಓಡಿಶಾ | ________ | |
| | ಪಂಜಾಬ | ________ | |

**ಉಪಕ್ರಮ :** ಧ್ವನಿ ಪ್ರದೂಷಣೆಯ ಕುರಿತು ನಾಲ್ಕು ಸಾಲು ಬರೆಯಿರಿ.

………………………………………………………………………

………………………………………………………………………

………………………………………………………………………

………………………………………………………………………